ಅಗತ್ಯವಾದ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಈಗ 1994ನೇ ಇಸವಿಯಲ್ಲಿ ನಾವಿದ್ದೇವೆ. 1962ರಲ್ಲಿ ಹಾಸನದ ಜನಸಂಖ್ಯೆ 30,000 ಇತ್ತು, ಈಗ ಒಂದೂಕಾಲು ಜನಸಂಖ್ಯೆ ಮೀರಿದೆ. ಅಲ್ಲಿರುವ ರಸ್ತೆ ಬಹಳ ಇಕ್ಕಟ್ಟಾಗಿರುವುದಲ್ಲದೆ ವಾಹನ ಸಂಚಾರ ಬಹಳ ಒತ್ತಡದಿಂದ ಕೂಡಿದ್ದು ಜನರು ತಿರುಗಾಡುವಂಥ ಸ್ಥಿತಿಯಲ್ಲಿಲ್ಲ. ಆದುದರಿಂದ, ಯೋಜನೆ ಕೈಗೊಳ್ಳಲು ಕೇಂದ್ರ ಸರ್ಕಾರದ ಅನುಮತಿಗಾಗಿ ಕಾಯಲಾಗುತ್ತಿದೆಯೆಂದು ಹೇಳುತ್ತಿದ್ದೀರಿ. ರಾಷ್ಟ್ರೀಯ ಹೆದ್ದಾರಿಯ ಎಲ್ಲಾ ಕಡೆ ಬೈಪಾಸ್ ರಸ್ತೆ ಮಾಡುತ್ತಿರುವಾಗ ಹಾಸನ ನಗರದಲ್ಲಿ ಜನದಟ್ಟಣೆ ಇರುವುದರಿಂದ ಆದಷ್ಟು ಬೇಗ ಬೈಪಾಸ್ ರಸ್ತೆ ಮಾಡಬೇಕಾಗಿರುವುದು ಅಗತ್ಯವಲ್ಲವೇ?

ಶ್ರೀ ಕೆ. ಎಚ್. ರಂಗನಾಥ್ : ಆದಷ್ಟು ಬೇಗ ಬೈಪಾಸ್ ರಸ್ತೆಯನ್ನು ಮಾಡಬೇಕೆಂಬುದೇ ಸರ್ಕಾರದ ಚಿಂತನೆಯಾಗಿದೆ. ಆದರೆ, ಈ ಯೋಜನೆಗೆ ಪೂರ್ಣ ಹಣವನ್ನು ಕೇಂದ್ರ ಸರ್ಕಾರವೇ ಕೊಡುವುದರಿಂದ ಅವರ ಒಪ್ಪಿಗೆಗಾಗಿ ಕಾಯಬೇಕಾಗಿರುತ್ತದೆ. ರಾಜ್ಯ ಸರ್ಕಾರ ಈ ಬಗ್ಗೆ ಎಲ್ಲಾ ರೀತಿಯ ಅಗತ್ಯ ಕ್ರಮ ಕೈಗೊಂಡಿದೆ. ಈ ಕುರಿತ ಪ್ರಸ್ತಾವನೆ ಕೇಂದ್ರ ಸರ್ಕಾರಕ್ಕೆ 1992ರಲ್ಲಿ ಹೋಗಿದ್ದು, 1993ರಲ್ಲಿ ಮತ್ತೆ ಕೆಲವು ವಿವರಣೆಯನ್ನು ಕೇಳಿದ್ದರು. ಅದನ್ನು ಮತ್ತೆ ನಾವು ಪರಿಶೀಲಿಸಿ ಪುನಃ ವಾಪಸ್ ಕಳುಹಿಸಿದ್ದೇವೆ. ಸದರಿ ಯೋಜನೆಯನ್ನು ಬಹುಶಃ ಮುಂದಿನ ವರ್ಷದಲ್ಲಿ ತೆಗೆದುಕೊಳ್ಳಬಹುದು.

ವಿದ್ಯುತ್ ಉಪಕೇಂದ್ರದ ಮಂಜೂರಾತಿ

461 - ಶ್ರೀ ಎನ್. ತಮ್ಮಣ್ಣ (ಕೆರಗೂಡು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ತಾಲ್ಲೂಕು ಕೆರಗೋಡು ಹೋಬಳಿ ಹಂಪಾಪುರ ಗ್ರಾಮದಲ್ಲಿ 250 ಕೆ.ವಿ. ಪವರ್ ಸಬ್-ಸ್ಟೇಷನ್ ಮಂಜೂರು ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಇದರ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ಇದರ ಅಂದಾಜು ವೆಚ್ಚವೆಷ್ಟು? ಇದರಿಂದ ಜಿಲ್ಲೆಯ ವಿದ್ಯುಚ್ಛಕ್ತಿ ಅಭಾವ ಕಡಿಮೆಯಾಗುವುದೆ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಹೌದು

ಆ) ನಿರ್ಮಾಣ ಕಾರ್ಯವನ್ನು ಜನವರಿ 95ರ ವೇಳೆಗೆ ಪ್ರಾರಂಭಿಸಲು ಉದ್ದೇಶಿಸಿದೆ. ನಿರ್ಮಾಣ ಕಾರ್ಯಗಳಿಗೆ ತಗಲುವ ಒಟ್ಟು ಅಂದಾಜು ವೆಚ್ಚ 3107 ಲಕ್ಷ ರೂ. ಇದರಿಂದ ಮಂಡ್ಯ ಜಿಲ್ಲೆಯಾದ್ಯಂತ ವಿದ್ಯುತ್ ಸರಬರಾಜಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸುಧಾರಣೆಯಾಗುವುದು.

ಪ್ರಶ್ನೆಯ ಸಂಖ್ಯೆ : 461

ಉತ್ತರ ಲಗತ್ತಿಸಿದೆ

ಶ್ರೀ ಎನ್. ತಮ್ಮಣ್ಣ : ಸನ್ಮಾನ್ಯ ಅಧ್ಯಕ್ಷರೆ, ಮಂಡ್ಯ ತಾಲ್ಲೂಕಿನ ಕೆರೆಗೋಡು ಹೋಬಳಿ ಹಂಪಾಪುರ ಗ್ರಾಮದಲ್ಲಿ 250 ಕೆ.ವಿ. ಪವರ್ ಸಬ್-ಸ್ಟೇಷನ್ ಮಂಜೂರು ಮಾಡುತ್ತೇವೆಂದು ಸರ್ಕಾರ ಹೇಳಿದೆ. ಇದಕ್ಕೆ ಲಭ್ಯವಾಗಿರತಕ್ಕ 25 ಎಕರೆ ಜಮೀನನ್ನೂ ಸಹ ಸರ್ಕಾರ ಮಂಜೂರು ಮಾಡಿದೆ. ಇದಕ್ಕೆ ಕೇಂದ್ರದ ಪವರ್ ಫೈನಾನ್ಸ್ ಕಾರ್ಪೊರೇಷನ್‌ನಿಂದ ಅನುಮತಿ ದೊರಕಿದೆಯೇ? ಆ ರೀತಿ ದೊರಕಿದ್ದರೆ ಜನವರಿ 95ರವರೆಗೆ ಏಕೆ ಕಾಯುತ್ತೀರಿ?

ಶ್ರೀ ವಿ. ಮುನಿಯಪ್ಪ : ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನಾವು ಈಗಾಗಲೇ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಅದಕ್ಕೆ ಬೇಕಾಗಿರುವ ಜಮೀನನ್ನು ಸ್ವಾಧೀನಪಡಿಸಿಕೊಂಡು ಅದಕ್ಕೆ ಬೇಕಾಗಿರುವ ಹಣವನ್ನು ಒದಗಿಸತಕ್ಕ ವ್ಯವಸ್ಥೆಯನ್ನು ಸರ್ಕಾರದ ವತಿಯಿಂದ ಈಗಾಗಲೇ ಮಾಡುತ್ತಿದ್ದೇವೆ. ಬಹುಶಃ ಅದನ್ನು 1995ರಲ್ಲಿ ಪ್ರಾರಂಭ ಮಾಡತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎನ್. ತಮ್ಮಣ್ಣ : ಈ ಹೈಟಿನ್‌ಷನ್ ಲೈನ್‌ನಿಂದ ಎರಡು ಕಡೆಯಿಂದ ತರಬಹುದು. ಒಂದು ಕುಣಿಗಲ್ ಕಡೆಯಿಂದ ಮತ್ತೊಂದು ಕೆಆರ್‌ಎಸ್‌ನ ಕಡೆಯಿಂದ. ಕೆಆರ್‌ಎಸ್‌ನ ಕಡೆಯಿಂದ ಲೈನ್ ತಂದರೆ 35 ಕಿ.ಮೀ. ಆಗುತ್ತದೆ. ಕುಣಿಗಲ್‌ನ ಕಡೆಯಿಂದ ತಂದರೆ 45 ಕಿ.ಮೀ. ಆಗುತ್ತದೆ. ಆದ್ದರಿಂದ ಹತ್ತಿರವಿರುವ ಮಾರ್ಗದಿಂದ ತಂದರೆ ಬೇಗ ಆಗುತ್ತದೆ. ಆದ್ದರಿಂದ ಈ ಕೆಲಸವನ್ನು ಜನವರಿ 95 ಮೊದಲೇ ಏತಕ್ಕೆ ಮಾಡಲು ಆಗುವುದಿಲ್ಲ? ಅದಕ್ಕೆ ಏನಾದರೂ ಸಮಸ್ಯೆ ಇದ್ದರೆ ದಯಮಾಡಿ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ : ಇದು ಸುಮಾರು 3107 ಲಕ್ಷದ ಅಂದಾಜು ವೆಚ್ಚದಲ್ಲಿ ನಿರ್ಮಾಣವಾಗಬೇಕಾಗಿರತಕ್ಕ ಕಾರ್ಯಕ್ರಮ. ಅದಕ್ಕೆ ಸ್ಟ್ರಕ್ಚರ್ ಎಲ್ಲಿಂದ ಬರಬೇಕು ಎಂಬ ಬಗ್ಗೆ ಸರ್ವೆ ಮಾಡಬೇಕಾಗಿದೆ. ಪಾಂಡವಪುರದ ಕಡೆಯಿಂದ 40 ಕಿ.ಮೀ. ಉದ್ದದಲ್ಲಿ 250 ಕೆ.ವಿ.ಯ ಪ್ರಸರಣ ಮಾರ್ಗವನ್ನು ನಿರ್ಮಾಣ ಮಾಡಬೇಕಾಗಿದೆ. ಆದ್ದರಿಂದ ಅದನ್ನು ಸಂಪೂರ್ಣವಾಗಿ ಸರ್ವೆ ಮಾಡಿದಮೇಲೆ ಆ ಕೆಲಸವನ್ನು ಪ್ರಾರಂಭ ವ್ಯವಸ್ಥೆ ಮಾಡಬೇಕಾಗುತ್ತದೆ.

ತೀರ್ಥಹಳ್ಳಿ ತಾಲ್ಲೂಕಿನ ಕುಂದಗ್ರಾಮದ ಮಾಲತಿ ನದಿಗೆ ಸೇತುವೆ ನಿರ್ಮಾಣ

207- ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೀರ್ಥಹಳ್ಳಿ ತಾಲ್ಲೂಕಿನ ಕುಂದಗ್ರಾಮದ ಮಾಲತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಬೇಕೆಂಬ ಬೇಡಿಕೆ ಬಹಳ ದಿನಗಳಿಂದ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಹಿಂದೆ ಈ ಸೇತುವೆ ನಿರ್ಮಾಣದ ಬಗ್ಗೆ ಸ್ವಲ್ಪ ಕಾಮಗಾರಿ ಆಗಿ ಹಾಗೆಯೇ ನಿಂತಿದ್ದು ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಸೇತುವೆ ನಿರ್ಮಿಸಬೇಕೆಂಬ ಬೇಡಿಕೆ ಗಮನಕ್ಕೆ ಬಂದಿದೆ?

ಆ) ಈ ಸೇತುವೆ ಕಾಮಗಾರಿಯನ್ನು 1962ರಲ್ಲಿ ಕಾರ್ಯಾರಂಭ ಮಾಡಲಾಗಿತ್ತು. ಅಡಿಪಾಯದ ವಿನ್ಯಾಸದ ಬದಲಾವಣೆಯಿಂದ ನಿರ್ಮಾಣ ಕಾರ್ಯದ ಮೊತ್ತ ಹೆಚ್ಚಳವಾಗಿದೆ. ಮಾಲತಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸುವುದರಿಂದ ಈ ಸೇತುವೆ ಮುಳುಗಡೆ ಆಗುವ ಸಂದರ್ಭದ ಹಿನ್ನೆಲೆಯಲ್ಲಿ ಸೇತುವೆ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ.

ಪ್ರಶ್ನೆಯ ಸಂಖ್ಯೆ : 207

ಉತ್ತರವನ್ನು ಲಗತ್ತಿಸಲಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ :ಸನ್ಮಾನ್ಯ ಅಧ್ಯಕ್ಷರೆ, ಪಿಡಬ್ಲ್ಯೂಡಿ ಇಲಾಖೆಯು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎನ್ನುವ ಬಗ್ಗೆ ಒಂದು ನಿದರ್ಶನ ಇಲ್ಲಿ ಇದೆ. 1962ನೇ ಇಸವಿಯಲ್ಲಿ ಮಂಜೂರಾದ ಸೇತುವೆಯು ಅನಂತರ ಅದರ ವಿನ್ಯಾಸದಲ್ಲಿ ಬದಲಾವಣೆಯಾಯಿತು ಎಂದು ಮುಂದೂಡಲಾಗಿದೆ. ಸೇತುವೆಯನ್ನು